**ವೆರೊನಿಕ ನಿಯಾರೀಬೊ ಅವರ ಎರಡು ಕವಿತೆಗಳು**

# ಜುವಾ ಲಾಕೊ ಲೆವೊ

ಭ್ರಮೆಯೊಳಗಾ ಮುಳುಗ್ತೀವಿ
ಭ್ರಮೆಯೊಳಗಾ ತೇಲ್ತೀವಿ
ಭ್ರಮೆಯೊಳಗಾ ಮೈ ಕೈ ಚಾಚ್ತೀವಿ

ಎಂಥಾ ಭ್ರಮಾಧೀನ ಜಗತ್ತಿನೊಳಗ
ಬದುಕೀವಿ ಗೊತ್ತೈತೇನು?

ಇದೆಲ್ಲಾ ಆಟ ಮನಸಿನ ಆಟ
ಮನಸು ನಮ್ ಜೋಡಿ ಆಡೊ ಆಟ
ಬಲು ಡೇಂಜರ್ ಆಟ
ಎಂದಾರೆ ಈ ಭ್ರಮ
ಹರದ ಗಿರದೀತೇನು?

ನೀವು ನಂಬ್ತೀರಾ?
ಖರೆನೂ ನಂಬ್ತೀರಾ?
ಸೂರ್ಯ ಪೂರ್ವದಾಗ ಹುಟ್ಟೋದೂ ಇಲ್ಲ
ಪಶ್ಚಿಮದಾಗ ಮುಳಗೋದೂ ಇಲ್ಲ
ಅಂದ್ರೆ ನಂಬ್ತೀರಾ?
ಖರೆನೂ ನಂಬ್ತೀರಾ!?

ಭೂಮಿ ಪೂರ್ವದಿಂದ ಪಶ್ಚಿಮಕ್ಕ
ಬುಗುರಿ ಹಾಂಗ ಗಿರಗಿರ ತಿರಗತೈತಿ
ಸುಮ್ನಾ ಭ್ರಮಾ ಸೃಷ್ಟಿ ಮಾಡ್ತೈತಿ
ಅಂದ್ರೆ ನಂಬ್ತೀರಾ?
ಖರೆನೂ ನನ್ ಮಾತು ನಂಬ್ತೀರಾ!?

ಇದು ಹುಚ್ಚರ ಸಂತಿ
ಇಲ್ಲಿ ಎಲ್ರೂ ಮಾನಸಿಕ ಗಿರಾಕಿನಾ
ಅವರವರ ಭ್ರಮಾ
ಅವರೇ ಸೃಷ್ಟಿ ಮಾಡ್ಕೋತಾರ
ಅವರವರ ಸತ್ಯಾನ
ಅವರೇ ಹುಡ್ಕೋತಾರ

ನೆತ್ತಿ ಮ್ಯಾಲಿನ ಸೂರ್ಯನ ಕೆಳಗ
ನಿಮಗಾಗಿ ಇಲ್ಲಿ ಒಂದೇ ಒಂದು
ಪುಗ್ಸಟ್ಟೆ ಉಪದೇಶ ಕಾದೈತಿ:
'ನಿನ್ನೊಳಗ ನೀ ತಿಳ್ಕೊ
ನಿನಗ ಬೇಕಾದ್ದ ಗಂಡನ ಮಾಡಿಕೊ!'

★Jua lako leo ಕೀನ್ಯಾದ ಸ್ವಹಿಲಿ ಭಾಷೆಯ ನುಡಿಗಟ್ಟು

# ಮತಾಂತರ

ಎಂಥಾ ಬುದ್ಧಿವಂತರಪ್ಪ ನೀವು
ನಮಪ್ಪನನ್ನ
ಅವ್ರಪ್ಪನನ್ನ
ಅವ್ರಪ್ಪನ ಅಪ್ಪನನ್ನ
ಮತಾಂತರಿಸಲು ಪ್ರಯತ್ನಿಸಿದಿರಿ
ಸಾಧ್ಯವಾಗಲೇ ಇಲ್ಲ

ನಮವ್ವನನ್ನ
ಅವ್ರವ್ವನನ್ನ
ಅವ್ರವ್ವನ ಅವ್ವನನ್ನ
ಯಾಮಾರಿಸಲು ಯತ್ನಿಸಿದಿರಿ
ಆದಾಗಲೇ ಇಲ್ಲ

ಕುರಿ ಕೋಳಿ ಮೇಕೆ
ಊಹೂಂ...
ಯಾರೂ ನಿಮ್ಮ ಮಾತಿಗೆ
ಕಿವಿಗೊಡಲೇ ಇಲ್ಲ

ಕೊನೆಗೆ
ನಮ್ಮ ನಡು ಬಗ್ಗಿಸಿದಿರಿ
ನಮ್ಮನ್ನೇ ನುಗ್ಗಿದಿರಿ
ನಮ್ಮನೆ ದೇವರನ್ನೇ ಮತಾಂತರಿಸಿದಿರಿ

ಅವತ್ತಿನಿಂದ
ನಮ್ಮ ದೇವರು ಮುಂದ ಮುಂದ
ನಾವು ನಿಮ್ಮ ಹಿಂದ ಹಿಂದ



